**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ಇವರ ಶೂನ್ಯ ವೇಳೆಯ ಸೂಚನೆಗೆ *ಹಿಂದುಳಿದ* ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ:**

**ಪ್ರಶ್ನೆ:**

ದಿನಾಂಕ: 03.12.2023 ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ.

- ಏನು ಕೇಳ್ತೀರಿ ನಮ್ಮತಿ, ಜಾತ್ರಿ, ಮೆರವಣಿಗಿಯೊಳಗ ನಕ್ಕೊಂತ ಕುಣೀತೀವಿ, ಕುಣಿಗೆ ಹೋಗೊತನಾನೂ ನಮ್ಮ ಸಂಘರ್ಷ ನಡದೇ ಇರ್ತದ, ಇರಾಕ ಮನಿಯಿಲ್ಲ. ಓದಸಾಕ ಸಾಲಿ ಇಲ್ಲ. ಒಂದು ಆದಾಯದ ಮೂಲ ಅಂತನೇ ಇಲ್ಲ, ಹಿಂಗೆ ತಮ್ಮ ಬದುಕಿನ ಎಳೆಯನ್ನು ಅಲೆಮಾರಿಗಳು ಬಿಚ್ಚಿಡುತ್ತಾರೆ.
- ಆಂಧ್ರಪ್ರದೇಶ ಮೂಲದ ಬುಡ್ಗಜಂಗಮ ಈ ಅಲೆಮಾರಿ ಕಲಾವಿದರು ಪರಿಶಿಷ್ಟ ಜಾತಿಗೆ ಸೇರಿದವರು. ಕಲಬುರಗಿ, ಕೊಪ್ಪಳ, ಬಳ್ಳಾರಿ, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳಲ್ಲಿಯೂ ಹರಡಿದ್ದಾರೆ. ಜಾಗ ಬದಲಿಸುವ ಈ ಕಲಾವಿದರು ದೊಡ್ಡ ದೊಡ್ಡ ಗಾರುಡಿ ಗೊಂಬೆಗಳನ್ನು ಧರಿಸಿ, ಮೆರವಣಿಗೆಯ ಮುಂಚೂಣಿಯಲ್ಲಿರುತ್ತಾರೆ.
- ತೆಲುಗು ಧಾಟಿಯ ಕನ್ನಡದಲ್ಲಿ ಮಾತನಾಡುವ ಇವರೆಲ್ಲರೂ ಜನಪದ ಹಾಡುಗಳ, ಕತೆಗಳ ಕಣಜವಾಗಿದ್ದಾರೆ. ಸಮಕಾಲೀನ ಘಟನೆಗಳನ್ನೂ ತಮ್ಮ ಕತೆಗಳಲ್ಲಿ ಸೇರ್ಪಡೆ ಮಾಡಬಲ್ಲ ಇವರನ್ನು ಹುಬ್ಬಳ್ಳಿಯಲ್ಲಿ ದಾಲ್‌ಪಟಾ ಕಲಾವಿದರು ಎಂದು ಕರೆಯುತ್ತಾರೆ. ಆದರೆ ಆಂಧ್ರ ಮೂಲದಿಂದ ಬಂದವರೆಲ್ಲ ಬುಡ್ಗಜಂಗಮರು ಎಂದು ಅಧ್ಯಯನಗಳು ತಿಳಿಸುತ್ತವೆ.
- ನರಸಿಂಹ, ನಂದಿ, ರಾಜ, ರಾಣಿ, ಕುದುರೆ, ಗೂಳಿ, ಗೊರಿಲ್ಲಾ, ಜೋಡಿಕುದುರೆಯ ಮುಖವಾಡಗಳನ್ನು ಧರಿಸಿ, ಲಾಸ್ಯದಿಂದ ಬಳಕುತ್ತ ನಡೆಯುವ ಇವರಲ್ಲಿ, ಕತ್ತಿವರಸೆ ಮಾಡುವವರು, ಚಕ್ರ ಸುತ್ತುವವರೂ ಇದ್ದಾರೆ. ತಮ್ಮ ಪರಂಪರೆಯನ್ನು ಬಿಡಲಾಗದೆ, ತಲೆ ಮಾರುಗಳಿಂದ ಇದೇ ವೃತ್ತಿಯಲ್ಲಿದ್ದಾರೆ.
- ಈ ವೃತ್ತಿ ಕೈ ಹಿಡಿದಿದೆಯೇ ಎಂಬ ಪ್ರಶ್ನೆಗೆ ಉತ್ತರ ಹೀಗಿದೆ. ಸರ್ಕಾರದಿಂದ ಕೆಲವರಿಗೆ ಮಾತ್ರ ಮಾಸಾಶನ ನೀಡುತ್ತಾರೆ. ವರ್ಷಕ್ಕೆ ಮೂರು ನಾಲ್ಕು ಕಾರ್ಯಕ್ರಮಗಳು ಸಿಗುತ್ತವೆ. ಎಂಟು ಮಂದಿ ಇರುವ ತಂಡಕ್ಕೆ ಗರಿಷ್ಠ ರೂ.30,000/-ಸಂಭಾವನೆ ನೀಡಲಾಗುತ್ತದೆ. ಹೊರಜಿಲ್ಲೆಯವರಿಗೆ ಹೋಗಿಬರುವ ಖರ್ಚು ಎಂದು 5 ಸಾವಿರ ಹೆಚ್ಚುವರಿಯಾಗಿ ಸೇರಿಸಿ ನೀಡಲಾಗುತ್ತದೆ. ಇದರಲ್ಲೇ ಇಡೀ ತಂಡ ಊಟ ವಸತಿಯನ್ನು ನೋಡಿಕೊಳ್ಳಬೇಕು.
- ಸುತ್ತಲಿನ ಗ್ರಾಮಗಳಲ್ಲಿ ವೇಷಧರಿಸಿ ಹೋಗಿ, ಕಾಳು ಕಡಿ ಸಂಗ್ರಹಿಸಿಕೊಂಡು ಬರುತ್ತಾರೆ. ಒಂದೆರಡು ರೂಪಾಯಿ ನಾಣ್ಯವೂ 5, 10 ರೂಪಾಯಿಗಳನ್ನೋ ನೀಡುತ್ತಾರೆ. ಇದರಿಂದ ದಿನ ಕಳೆಯುವುದು ಕಷ್ಟವಾಗುತ್ತದೆ. ಆದ್ದರಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಉತ್ತರ:**

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ (ಬಳ್ಳಾರಿ, ಕಲಬುರಗಿ, ಕೊಪ್ಪಳ, ಧಾರವಾಡ, ರಾಯಚೂರು ಮುಂತಾದ) ವಾಸವಿರುವ ಬುಡ್ಗಜಂಗಮ, ಅಲೆಮಾರಿ, ಹಗಲು ವೇಷಗಾರರು ಹಾಗೂ ದಾಲ್‌ಪಟ ಕಲಾವಿದರು ವಿಶೇಷವಾಗಿ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಬರುವ ಪ್ರಮುಖ ಪಾತ್ರಗಳ ವೇಷಗಳನ್ನು ಧರಿಸಿಕೊಂಡು ಊರೂರು ಸುತ್ತಾಡುತ್ತಾ ಜೀವನನಿರ್ವಹಣೆ ಮಾಡುತ್ತಿರುವುದು ಕಂಡುಬರುತ್ತದೆ. ಈ ಕಲೆಗಳ ಜೊತೆಗೆ ಬಯಲಾಟ, ತೊಗಲುಗೊಂಬೆ, ಕತ್ತಿವರಸೆ ಮುಂತಾದ ಕಲೆಗಳ ಪ್ರದರ್ಶನ ಕೂಡಾ ಮಾಡುತ್ತಾರೆ. ಇಂತಹ ಕಲಾವಿದರ ಕಲೆಗಳನ್ನು ಗುರುತಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳುವ ಯೋಜನೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ.

-2...

ಇಲಾಖೆಯ ಪ್ರಾಯೋಜನೆಯ ಕಾರ್ಯಕ್ರಮದಡಿ ಈ ಕಲಾವಿದರಿಗೆ ಕಾರ್ಯಕ್ರಮಗಳನ್ನು ನೀಡುವುದರೊಂದಿಗೆ ಕಲಾವಿದರಿಗೆ ಗೌರವ ಸಂಭಾವನೆಯನ್ನು ರೂ.20,000/- ರಿಂದ ರೂ.30,000/- ಗಳನ್ನು ನೀಡಲಾಗುತ್ತಿದೆ. ಬೇರೆ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಪ್ರಾಯೋಜಿಸಿದಲ್ಲಿ ನಿಯಮಾನುಸಾರ ಪ್ರಯಾಣ ವೆಚ್ಚ ಇತ್ಯಾದಿಗಳನ್ನು ನೀಡಲಾಗುತ್ತಿದೆ.

ಅಲ್ಲದೇ, ನಿಯಮಾನುಸಾರ 58 ವರ್ಷ ಪೂರೈಸಿದ ಅರ್ಹ ಕಲಾವಿದರಿಗೆ ಪ್ರತಿ ಮಾಹೆಯಾನ ರೂ.2,000/-ಗಳ ಮಾಸಾಶನವನ್ನು ನೀಡಲಾಗುತ್ತಿದೆ. ಸದರಿ ಸಮುದಾಯದ ಕಲಾವಿದರು ನೋಂದಾಯಿಸಿಕೊಂಡಿರುವ ಅರ್ಹ ಕಲಾ ಸಂಘ-ಸಂಸ್ಥೆಗಳ ಮೂಲಕ ಏರ್ಪಡಿಸುವ ಕಾರ್ಯಕ್ರಮಗಳಿಗೆ ಕನಿಷ್ಠ ರೂ.50,000/- ದಿಂದ ರೂ.3.00 ಲಕ್ಷದವರೆಗೆ ಧನಸಹಾಯವನ್ನು ನೀಡಲಾಗುತ್ತದೆ. ಕರ್ನಾಟಕ ಜಾನಪದ ಅಕಾಡೆಮಿ ವತಿಯಿಂದ ಕಲಾವಿದರಿಗೆ ತರಬೇತಿ ನೀಡಲಾಗುತ್ತಿದ್ದು, ಸದರಿ ಸಮುದಾಯದ ಅರ್ಹ ಹಿರಿಯ ಕಲಾವಿದರಿಗೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜಾನಪದಶ್ರೀ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ.

ಸಂಖ್ಯೆ: ಕಸಂವಾ 45 ಕವಿಸ 2023

**(ಶಿವರಾಜ ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು